# *ಕರ್ನಾಟಕ ಲೋಕಾಯುಕ್ತ*

ಸಂ.ಕಂಪ್ಲೇಂಟ್/ಉಪಲೋಕ್/ಜಿಎಲ್.ಬಿ–1930/2014/ಡಿಆರ್ಇ–5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ:8.2.2017.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ*

ವಿಷಯ: ಶ್ರೀಮತಿ.ಹೆಚ್.ಪಿ.ಶೋಭನಾಮೂರ್ತಿ, ನಂ:15, ಅನ್ನಪೂರ್ಣೇಶ್ವರಿ ಬಡಾವಣೆ, 7ನೇ ಮೇನ್, ಉಲ್ಲಾಳ ಮುಖ್ಯ ರಸ್ತೆ, ಜ್ಞಾನಭಾರತಿ, ಬೆಂಗಳೂರು ಅವರು ಸಲ್ಲಿಸಿದ ದೂರಿನ ಕುರಿತು.

****

ಶ್ರೀಮತಿ.ಹೆಚ್.ಪಿ.ಶೋಭನಾಮೂರ್ತಿ, ನಂ:15, ಅನ್ನಪೂರ್ಣೇಶ್ವರಿ ಬಡಾವಣೆ, 7ನೇ ಮೇನ್, ಉಲ್ಲಾಳ ಮುಖ್ಯ ರಸ್ತೆ, ಜ್ಞಾನಭಾರತಿ, ಬೆಂಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು ತಹಶೀಲ್ದಾರ್, ಹೊಸಪೇಟೆ ತಾಲ್ಲೂಕು ಬಳ್ಳಾರಿ ಜಿಲ್ಲೆ, ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2) **ದೂರಿನ ಸಾರಾಂಶವೇನೆಂದರೆ;** ಸದರಿ ದೂರಿನಲ್ಲಿ ಶ್ರೀ.ಚಂದ್ರಪ್ಪ ಮತ್ತು ಶ್ರೀಮತಿ.ಅಯ್ಯಮ್ಮ ಗಂಡ: ಚಂದ್ರಪ್ಪ ಎನ್ನುವ ಇಬ್ಬರು ಬಡ ವ್ಯಕ್ತಿಗಳಿಗೆ ಅವರು ಅನ್ನಪೂರ್ಣೇಶ್ವರಿ ಬಡಾವಣೆ, 7ನೇ ಮುಖ್ಯ ರಸ್ತೆ, ಉಲ್ಲಾಳ ಮುಖ್ಯ ರಸ್ತೆ, ಬೆಂಗಳೂರಿನಲ್ಲಿ ವಾಸವಾಗಿರುವಾಗ 2011ನೇ ಇಸವಿಯಲ್ಲಿ ಇವರಿಬ್ಬರಿಗೂ ಹಿರಿಯ ನಾಗರೀಕರ ಪೆನ್ಶನ್ ಯೋಜನೆಯ ಅಡಿಯಲ್ಲಿ ಪಿಂಚಣಿ ಬರುತ್ತಿತ್ತು. ಅವರಿಬ್ಬರೂ ಮಗಳು ಮತ್ತು ಅಳಿಯನ ಮನೆಯಲ್ಲಿ ವಾಸವಾಗಿದ್ದರು. ಮಗಳ ಗಂಡ ತೀರಿ ಹೋದ ನಂತರ ಇಬ್ಬರೂ ಹೊಸಪೇಟೆ ತಾಲ್ಲೂಕಿನ ಕಮಲಾಪುರ ಗ್ರಾಮಕ್ಕೆ ವಾಸಕ್ಕೆ ಹೋದರು. ದಿ: 30.6.2012ರ ವರೆಗೆ ಪ್ರತಿ ತಿಂಗಳು ಬರುತ್ತಿದ್ದ ಪಿಂಚಣಿ ವೇತನ ನಿಂತು ಹೋಗಿದೆ. ಅವರಿಬ್ಬರೂ ಈಗ ಹೊಸಪೇಟೆಯ

ಕಮಲಾಪುರ ಗ್ರಾಮದಲ್ಲಿ ವಾಸ ಮಾಡುತ್ತಿರುವುದರಿಂದ, 1.1.2012ರಿಂದ ಮುಂದಿನ ವೇತನವನ್ನು ಹೊಸಪೇಟೆಯ ಖಜಾನೆಯಿಂದ ಪಾವತಿ ಮಾಡಿಸಲು ಆದೇಶ ಕೊಡುವಂತೆ ಅರ್ಜಿ ಹಾಕಿರುತ್ತಾರೆ. ಆದರೆ, ಕೇವಲ ಪತ್ರ ವ್ಯವಹಾರವನ್ನೇ ಮಾಡುತ್ತಿದ್ದು, ಹೋಸದಾಗಿ ಅರ್ಜಿ ಸಲ್ಲಿಸುವಂತೆ ಸೂಚಿಸುತ್ತಿದ್ದಾರೆ. ತಹಶೀಲ್ದಾರ್‌ರು ಸದರಿ ಅರ್ಜಿದಾರರುಗಳಿಗೆ ತೊಂದರೆ ಕೊಡುತ್ತಿದ್ದು ಅರ್ಜಿದಾರರು ತಹಶೀಲ್ದಾರ್, ಹೊಸಪೇಟೆ, ಬಳ್ಳಾರಿಯ ಡಿ.ಸಿ. ರವರಿಗೆ ಪ್ರಧಾನ ಕಂದಾಯ ಅಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಆದರೆ, ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ, ಸೂಕ್ತ ಕ್ರಮ ತೆಗೆದುಕೊಳ್ಳಲು ಕೋರಿದ್ದಾರೆ.

3. ಪ್ರಾಥಮಿಕ ಪರಿಶೀಲನೆಯಲ್ಲಿ ದೂರಿನ ಪ್ರತಿ ಮತ್ತು ಅಡಕಗಳನ್ನು ಎದುರುದಾರರಿಗೆ ಕಳುಹಿಸಿ, ಆಕ್ಷೇಪಣೆಗಳನ್ನು ತರಿಸಿಕೊಳ್ಳಲು ಆದೇಶವಾಗಿದ್ದು, ಎದುರುದಾರರು ತಮ್ಮ ತಕರಾರು ಸಲ್ಲಿಸಿದದ್ದು, ಸದರಿ ತಕರಾರಿನಲ್ಲಿ ಶ್ರೀಮತಿ.ಅಯ್ಯಮ್ಮ ಮತ್ತು ಚಂದ್ರಪ್ಪ ಇವರಿಬ್ಬರಿಗೂ ಸಂಧ್ಯಾ ಸುರಕ್ಷಾ ಯೋಜನೆಯಡಿಯಲ್ಲಿ ಮಾಶಾಸನವನ್ನು ಮಂಜೂರು ಮಾಡಲಾಗಿದೆ. ಆಗ, ಬೆಂಗಳೂರಿನ ವಿಳಾಸವನ್ನು ತೋರಿಸಿದ್ದಾರೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್.ಡಿ.62/ಡಿ.ಎಸ್.ಪಿ 2009(1) ದಿ: 10.2.2011ರಂತೆ ಭೌತಿಕ ಪರಿಶೀಲನೆ ಕಾರ್ಯಕ್ರಮ ಮಾಡಲಾಗಿ ಮಾಶಾಸನ ಸ್ಥಗಿತಗೊಂಡಿರುತ್ತದೆ. ಜಿಲ್ಲಾ ಖಜಾನೆ ಅಧಿಕಾರಿಗಳು, ಬೆಂಗಳೂರು ರವರು ತಮ್ಮ ಕಛೇರಿಗೆ ಪತ್ರ ಬರೆದು ಸ್ಥಗಿತಗೊಂಡಿರುವುದನ್ನು ದೃಢಪಡಿಸಿರುತ್ತಾರೆ. ಕಮಲಾಪುರ ಗ್ರಾಮದಲ್ಲಿ ಹಾಲಿ ವಾಸ ಮಾಡುತ್ತಿದ್ದೇವೆ ಎಂದು ತಿಳಿಸಿ ಅರ್ಜಿದಾರರು ಮನವಿಯನ್ನು ಸಲ್ಲಿಸಿದ್ದು, ಮಾಶಾಸನವನ್ನು ಹೊಸಪೇಟೆಯ ಖಜಾನೆ ಮುಖಾಂತರ ಕೊಡುವಂತೆ ಕೋರಿಕೊಂಡಿದ್ದು, ಬೆಂಗಳೂರು ನಗರ ಜಿಲ್ಲೆಯ ಖಜಾನಾಧಿಕಾರಿಗಳಿಗೆ ಪತ್ರ ಬರೆದಾಗ, ಮಾಶಾಸನದ ಬಾಕಿ ಮೊಬಲಗು ಪಾವತಿ ಮಾಡಲು ಹಾಗೂ ವರ್ಗಾವಣೆ ಮಾಡಲು ಬರುವುದಿಲ್ಲವೆಂದು ತಿಳಿಸಿದ್ದಾರೆ. ಆದ್ದರಿಂದ, ತಾವು ಮಾಶಾಸನ ಮಂಜೂರು ಮಾಡುವಂತೆ ಕೋರಿ ಪತ್ರ ಬರೆದಿರುವುದಾಗಿ ತಿಳಿಸಿದ್ದಾರೆ. ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಕೋರಿದ್ದಾರೆ.

4. ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರಿಂದ ಪ್ರತ್ಯುತ್ತರ ಕೋರಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನೇ ಪುನಃ ಉಲ್ಲೇಖಿಸಿದ್ದಾರೆ.

5. ನನ್ನ ಹಿಂದಿನ ಉ.ನಿ.ವಿ–5 ರವರು ಅಂತಿಮ ಪರಿಶೀಲನಾ ಟಿಪ್ಪಣಿಯನ್ನು ತಯಾರಿಸಿದ್ದು, ಸದರಿ ಟಿಪ್ಪಣಿಯಲ್ಲಿ ಪಿಂಚಣಿ ನಿರ್ದೇಶನಾಲಯ ಮತ್ತು ಸಾಮಾಜಿಕ ಭದ್ರತೆಯ ನಿರ್ದೇಶಕರು ಕಂದಾಯ ಇಲಾಖೆ ಬೆಂಗಳೂರು ಇವರು ತಹಶೀಲ್ದಾರ್‌ರು ಬೆಂಗಳೂರು ಉತ್ತರ ತಾಲ್ಲೂಕು ರವರಿಗೆ ಬರೆದ ಪತ್ರದ ಮೇಲೆ ಏನು ಕ್ರಮ ಕೈಗೊಂಡಿದ್ದಾರೆ ಎನ್ನುವುದರ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಈ ಸಂಬಂಧ ಸದರಿ ಬೆಂಗಳೂರು ಉತ್ತರ ತಾಲ್ಲೂಕಿನ ತಹಶೀಲ್ದಾರ್‌ರು ಸಲ್ಲಿಸಿದ ವರದಿಯಲ್ಲಿ, ಕೂಡಲೇ ಸಾಮಾಜಿಕ ಭದ್ರತಾ ಯೋಜನೆಯಡಿ ಮಾಶಾಸನವನ್ನು ಮಂಜೂರು ಮಾಡುವಂತೆ ಕೋರಿ ಪತ್ರ ಬರೆಯಲಾಗಿದೆ ಎಂದು ತಿಳಿಸಿ, ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಕೋರಿದ್ದಾರೆ.

6. ಸದರಿ ವರದಿಯನ್ನು ತಹಶೀಲ್ದಾರ್ ಹೊಸಪೇಟೆ ಇವರಿಗೆ ಕಳುಹಿಸಿ, ಕ್ರಮ ವಹಿಸುವಂತೆ ಸೂಚಿಸಿದಾಗ, ತಾವು ಪೂರಕ ದಾಖಲೆಗಳನ್ನು ಅಟಲ್ ಜಿ ಜನ ಸ್ನೇಹಿ ಕೇಂದ್ರ ಕಮಲಾಪುರ ಕೇಂದ್ರದಲ್ಲಿ ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಸಲ್ಲಿಸಿದರೆ ಮಂಜೂರು ಮಾಡುವ ಬಗ್ಗೆ ಕ್ರಮ ಜರುಗಿಸಬಹುದೆಂದು ತಿಳಿಸಿದ್ದಾರೆ.

7. ಈ ಪ್ರಕರಣದಲ್ಲಿ ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಶ್ರೀ.ಚಂದ್ರಪ್ಪ ಮತ್ತು ಶ್ರೀಮತಿ. ಅಯ್ಯಮ್ಮ ಇವರಿಗೆ ಮಾಶಾಸನ ಮಂಜೂರಾದ ವಿಷಯ ವಿವಾದದಲ್ಲಿ ಇಲ್ಲ, ಅವರಿಬ್ಬರೂ ಈ ಹಿಂದೆ ಬೆಂಗಳೂರಿನಲ್ಲಿ ಉಲ್ಲಾಳ ಮುಖ್ಯ ರಸ್ತೆಯ 7ನೇ ಮುಖ್ಯ ರಸ್ತೆಯಲ್ಲಿರುವ ಮಗಳ ಮನೆಯಲ್ಲಿ ವಾಸವಾಗಿದ್ದರೂ ಎನ್ನುವುದು ಸಹ ವಿವಾದದಲ್ಲಿರುವುದಿಲ್ಲ. ಕಂದಾಯ ಇಲಾಖೆಯವರು ಕೊಟ್ಟಿರುವ ಎರಡು ಮಂಜೂರಾತಿ ಆದೇಶ ಪತ್ರದಲ್ಲಿ "ವೇತನದಾರನು/ಸ್ವೀಕೃತರು ಯಾವುದೇ ಕಾಲದಲ್ಲಿ ವಿಳಾಸದಲ್ಲಾದ ಯಾವುದೇ ಬದಲಾವಣೆಯನ್ನು ವಿಳಂಬ ಮಾಡದೆ ತಹಶೀಲ್ದಾರ್‌ರಿಗೆ ತಿಳಿಸತಕ್ಕದ್ದು, ವಿಳಂಬ ಮಾಡುವುದರಿಂದ ವೇತನದ ಸಂದಾಯವನ್ನು ಮುಂದೂಡಲಾಗುತ್ತದೆ" ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ.

8. ವಿಷಯ ಹೀಗಿರುವಾಗ, ಬೆಂಗಳೂರು ಉತ್ತರ ತಾಲ್ಲೂಕಿನ ತಹಶೀಲ್ದಾರ್‌ರಿಗೆ ಸದರಿ ಮಂಜೂರಿದಾರರು ಹೊಸಪೇಟೆಯ ಕಮಲಾಪುರ ಗ್ರಾಮದಲ್ಲಿ ವಾಸಿಸುತ್ತಿದ್ದಾರೆಂದು ತಿಳಿದ ನಂತರ ಮುಂದೂಡಲಾಗಿರುವ ಎಲ್ಲಾ ವೇತನವನ್ನು ಕೊಡಬೇಕಾಗುತ್ತದೆ ಅಷ್ಟೇ ಹೊರತು, ಈ ವೃದ್ಧಾಪ್ಯ ವೇತನವನ್ನು ಸ್ಥಗಿತಗೊಳಿಸಲು ಬರುವುದಿಲ್ಲ ಎಂದು ಅಭಿಪ್ರಾಯಪಡಬೇಕಾಗುತ್ತದೆ.

ಏಕೆಂದರೆ, ಸಂಧ್ಯಾ ಸುರಕ್ಷಾ ಯೋಜನೆಯ ಅಡಿಯಲ್ಲಿ ಒಂದು ಸಲ ಮಂಜೂರಾಗಿರುವ ಪಿಂಚಣಿ/ ವೇತನವು ಸದರಿ ವ್ಯಕ್ತಿಯು ಮೃತನಾಗುವವರೆಗೆ ಕೊಡಲಾಗುತ್ತದೆಂದು ಎರಡು ಮಂಜೂರಾತಿ ಆದೇಶಗಳಲ್ಲಿ ಬರೆಯಲಾಗಿದೆ.

9. ದಿ: 12.8.2016ರ ಅಂತಿಮ ಪರಿಶೀಲನಾ ಟಿಪ್ಪಣಿಯಂತೆ ಬೆಂಗಳೂರು ಉತ್ತರ ವಲಯ ತಹಶೀಲ್ದಾರ್ ರವರು ಮತ್ತು ತಹಶೀಲ್ದಾರ್ ಹೊಸಪೇಟೆ ಇವರುಗಳಿಗೆ ಪತ್ರ ಬರೆದು ಶ್ರೀ.ಚಂದ್ರಪ್ಪ ಮತ್ತು ಶ್ರೀಮತಿ.ಅಯ್ಯಮ್ಮ ಇವರಿಗೆ ಸಂದ್ಯಾಸುರಕ್ಷಾ ಯೋಜನೆಯಡಿಯಲ್ಲಿ ಮಾಸಾಶನ ಮಂಜೂರು ಆದ ಆದೇಶ ಪತ್ರದಲ್ಲಿ "ವೇತನದಾರರು / ಸ್ವೀಕೃತರು ಯಾವುದೇ ಕಾಲದಲ್ಲಿ ವಿಳಾಸದಲ್ಲಾದ ಯಾವುದೇ ಬದಲಾವಣೆಯನ್ನು ವಿಳಂಬ ಮಾಡದೆ ತಹಶೀಲ್ದಾರ್ ರವರಿಗೆ ತಿಳಿಸತಕ್ಕದ್ದು ವಿಳಂಬ ಮಾಡುವುದರಿಂದ ವೇತನದ ಸಂದಾಯವನ್ನು ಮುಂದೂಡಲಾಗುತ್ತದೆ." ಅಂತ ಮಾತ್ರ ಇದ್ದು ವೇತನ ಕೊಡುವುದು ಸ್ಥಗಿತವಾಗುವುದಿಲ್ಲ ಅಂತ ಅಭಿಪ್ರಾಯಪಟ್ಟು ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಅಂತ ಕೇಳಲಾಗಿ ಪುನಃ ಹೊಸಪೇಟೆ ತಹಶೀಲ್ದಾರ್ ರವರು ಅಟಲ್ ಜನಸ್ನೇಹಿ ಕೇಂದ್ರದಲ್ಲಿ ಅರ್ಜಿದಾರರು ತಮ್ಮ ಭಾವ ಚಿತ್ರ ಆದಾಯ ಪ್ರಮಾಣ ಪತ್ರ ರೇಷನ್ ಕಾರ್ಡ್ ಮತ್ತು ಚುನಾವಣೆ ಗುರುತಿನ ಚೀಟಿ ಆಧಾರ್ ಕಾರ್ಡ್ ಇವುಗಳನ್ನು ಸಲ್ಲಿಸಿದ ಕುರಿತು ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ ಕಮಲಾಪುರದಲ್ಲಿ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಪಿಂಚಣೆ ಮರು ಮಂಜೂರು ಮಾಡಿಕೊಳ್ಳಬಹುದು ಖುದ್ದು ಹಾಜರಾಗಿ ಅರ್ಜಿ ಸಲ್ಲಿಸಿದರೆ ಮಾತ್ರ ಕ್ರಮ ಕೈಗೊಳ್ಳಲು ಬರುತ್ತದೆ. ಏಕೆಂದರೆ ಎಲ್ಲವೂ ಗಣಕೀಕರಣ ವ್ಯವಸ್ಥೆಯಲ್ಲಿದ್ದೆ ಅಂತ ತಿಳಿಸಿದ್ದಾರೆ. ಕಡತವನ್ನು ಸಂಪೂರ್ಣವಾಗಿ ಪರಿಶೀಲಿಸಲಾಗಿ ಅರ್ಜಿದಾರರಿಗೆ ಮಂಜೂರಾಗಿದ್ದ ಸಂದ್ಯಾಸುರಕ್ಷಾ ವೇತನವನ್ನು ತಡೆಹಿಡಿಯಲು ಬರುತ್ತದೆ ಹೊರತು ನಿಲ್ಲಿಸಲು ಬರುವುದಿಲ್ಲ ಆದ್ದರಿಂದ ಇಬ್ಬರು ಅರ್ಜಿದಾರರು ಅಟಲ್ ಜನಸ್ನೇಹಿ ಕೇಂದ್ರ ಕಮಲಾಪುರದಲ್ಲಿ ಹಾಜರಾಗಿ ಅರ್ಜಿ ಸಲ್ಲಿಸಿ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಮರಳಿ ವೃದ್ಯಾಪವೇತನವನ್ನು ಪಡೆದುಕೊಳ್ಳಲು ಅರ್ಜಿಯನ್ನು ಸಲ್ಲಿಸುವಂತೆ ಸೂಚಿಸಲಾಗುವುದು ಆ ರೀತಿಯ ಅರ್ಜಿಯನ್ನು ಸಲ್ಲಿಸಿದ ನಂತರ ಹೊಸಪೇಟೆ ತಹಶೀಲ್ದಾರ್ ರವರು ಮತ್ತು ಬೆಂಗಳೂರು ಉತ್ತರ ತಹಶೀಲ್ದಾರ್ ರವರು ಮಾಸಾಶನದ ವರ್ಗಾವಣೆಗೆ ಮತ್ತು ನಿರಂತರವಾಗಿ ಮಾಸಾಶನದ ಪಾವತಿಗಾಗಿ ಸೂಕ್ತ ಕ್ರಮ ಜರುಗಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ,

ತಹಶೀಲ್ದಾರ್ ಹೊಸಪೇಟ್ ತಾಲ್ಲೂಕು ಮತ್ತು ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು ಇವರುಗಳಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.